**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ದಿನಾಂಕಃ 07.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ**
**ಶ್ರೀ . C.R.B. ವಕೀಲರಿಂದಃ**

ದಾವಾಸ್ವತ್ತಿನ ಮನೆ ನಂಃ 409 ಮತ್ತು ಖಾತೆ ನಂ ಃ387 ಅದರ ವಿಸ್ತೀರ್ಣ ಪೂರ್ವ – ಪಶ್ಚಿಮ -52 ಅಡಿ , ಉತ್ತರ – ದಕ್ಷಿಣ -19 ಅಡಿ . ದಾವಾಸ್ವತ್ತು ಕಲ್ಲೂರು ಗ್ರಾಮದಲ್ಲಿರುತ್ತದೆ. ಅದರ ಚಕ್ಕುಬಂದಿ ಪೂರ್ವಕ್ಕೆ- ಗಲ್ಲಿ , ಪಶ್ಚಿಮಕ್ಕೆ - ಪಂಚಾಯಿತಿ ರಸ್ತೆ , ಉತ್ತರಕ್ಕೆ - ಗಲ್ಲಿ , ದಕ್ಷಿಣಕ್ಕೆ- ನನಗೆ ಸೇರಿದ 6 ಅಡಿ ಜಾಗ . ದಾವಾಸ್ವತ್ತಿನ ದಕ್ಷಿಣಕ್ಕೆ ನನಗೆ ಸೇರಿದ 6 ಅಡಿ ಜಾಗ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ದಕ್ಷಿಣಕ್ಕೆ 3 ಅಡಿ ಗಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ 3 ಅಡಿ ಗಲ್ಲಿಯ ಪಕ್ಕದಲ್ಲಿ ಕಲ್ಲುಕೂಚುಗಳನ್ನು ನಿಲ್ಲಿಸಲಾಗಿದೆ ಎಂದರೆ ಸರಿ. ಸದರಿ ಕಲ್ಲುಕೂಚುಗಳ ದಕ್ಷಿಣಕ್ಕೆ ಪ್ರತಿವಾದಿಯ ಮನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ 6 ಅಡಿ ಜಾಗದ ನಂತರ ರಸ್ತೆ ಇದ್ದು ಅದರ ನಂತರ ಈಶ್ವರಪ್ಪರವರ ಮನೆ ಇದ್ದು ಅದನ್ನು ಈಗ ಪ್ರತಿವಾದಿ ಖರೀದಿಸಿ ಅದರಲ್ಲಿ ಮನೆ ನಿರ್ಮಿಸಿರುತ್ತಾರೆ ಎನ್ನುತ್ತಾರೆ. ಸದರಿ ಕಲ್ಲುಕೂಚುಗಳ ಪಕ್ಕದಲ್ಲಿ ನನಗೆ ಸೇರಿದ 6 ಅಡಿ ಜಾಗ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ನಾನು 2006 ರಲ್ಲಿ ಖರೀದಿಸಿರುತ್ತೇನೆ. ದಾವಾಸ್ವತ್ತನ್ನು ಎಷ್ಟು ಹಣಕ್ಕೆ ಕೊಂಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ದಾವಾಸ್ವತ್ತನ್ನು ರೇವಣಸಿದ್ದಯ್ಯರವರಿಂದ ಖರೀದಿಸಿರುತ್ತೇನೆ ಎಂದರೆ ಸರಿ . ದಾವಾಸ್ವತ್ತಿನಲ್ಲಿ ಮದ್ಯಭಾಗದಲ್ಲಿ ಮನೆ ಇರುತ್ತದೆ ಎಂದರೆ ಸರಿ. ಸದರಿ ಮನೆಯ ಬಾಗಿಲು ಪಶ್ಚಿಮಕ್ಕೆ ಮತ್ತು ದಕ್ಷಿಣಕ್ಕೆ ಇರುತ್ತದೆ. ನಾನು ಖರೀದಿಸಿದ ಸ್ವತ್ತಿನ ಒಟ್ಟು ವಿಸ್ತೀರ್ಣ 52*19 ಅಡಿ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ 760 ಚದುರ ಅಡಿಯ ಜಾಗದಲ್ಲಿ ಮನೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

2. ನಿ.ಪಿ.1 ಕ್ರಯಪತ್ರವನ್ನು ನಾನೇ ಬರೆಸಿಕೊಂಡಿರುತ್ತೇನೆ ಎಂದರೆ ಸರಿ . ನಿ.ಪಿ.1 ರಂತೆ ದಾವಾಸ್ವತ್ತಿನ ಒಟ್ಟು ವಿಸ್ತೀರ್ಣ 988 ಚದುರ ಅಡಿ ಎಂದರೆ ಸರಿ . ಸದರಿ 988 ಚದುರ ಅಡಿಯಲ್ಲಿ 760 ಚದುರ ಅಡಿಯಲ್ಲಿ ಮನೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.ಸದರಿ ಮನೆಯನ್ನು ಹೊರತುಪಡಿಸಿ ದಾವಾಸ್ವತ್ತಿನಲ್ಲಿ 228 ಚದುರ ಅಡಿ ಜಾಗ ಉಳಿಯುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತಿನಲ್ಲಿರುವ ನನ್ನ ಮನೆಯ ಉತ್ತರ ಮತ್ತು ದಕ್ಷಿಣಕ್ಕೆ ಖಾಲಿ ಜಾಗ ಇರುತ್ತದೆ ಎಂದರೆ ಸರಿ . ಸದರಿ ಎರಡೂ ಕಡೆ ಇರುವ ಖಾಲಿ ಜಾಗವನ್ನು ಸೇರಿಸಿ ದಾವಾಸ್ವತ್ತಿನ ಉತ್ತರ – ದಕ್ಷಿಣ ವಿಸ್ತೀರ್ಣ 19 ಅಡಿಯನ್ನು ನಿ.ಪಿ.1 ರ ಮುಖಾಂತರ ನನಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ . ಸದರಿ ಉತ್ತರ ಮತ್ತು ದಕ್ಷಿಣ ಕ್ಕೆ ಇರುವ ಖಾಲಿಜಾಗದ ಒಟ್ಟು ವಿಸ್ತೀರ್ಣ 4 ವರೆ ಅಡಿ ಎಂದರೆ ಸಾಕ್ಷಿ ದಕ್ಷಿಣಕ್ಕೆ ನನಗೆ ಸೇರಿದ 6 ಅಡಿ ಜಾಗ ಇರುತ್ತದೆ ಎನ್ನುತ್ತಾರೆ. ಮನೆಯ ಉತ್ತರಕ್ಕೆ ಸುಮಾರು 2 ಅಡಿ ಖಾಲಿಜಾಗ ಇರುತ್ತದೆ ಎಂದರೆ ಸರಿ . ಮನೆಯ ದಕ್ಷಿಣಕ್ಕೆ 2 ವರೆ ಅಡಿ ಖಾಲಿ ಜಾಗ ಇರುತ್ತದೆ ಎಂದರೆ ಸಾಕ್ಷಿ 6 ಅಡಿ ಜಾಗ ಇರುತ್ತದೆ ಎನ್ನುತ್ತಾರೆ. ಸದರಿ 2 ವರೆ ಅಡಿಯ ನಂತರ ದಕ್ಷಿಣದ ಕಡೆಗೆ ನಾನು ಖರೀದಿಸಿರುವ ದಾವಾಸ್ವತ್ತಿನಲ್ಲಿ ಯಾವುದೇ ಜಾಗ ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಕ್ಷಿಣದ ಕಡೆಗೆ 2 ವರೆ ಅಡಿಗಳ ನಂತರ ಕಲ್ಲುಕೂಚುಗಳು ಇರುತ್ತವೆ ಎಂದರೆ ಸರಿಯಲ್ಲ. ದಕ್ಷಿಣದ ಕಡೆಗೆ ಇರುವ 2 ವರೆ ಅಡಿಗಳಗಲ್ಲಿಯ ಮೂಲಕ ಪೂರ್ವ - ಪಶ್ಚಿಮವಾಗಿ ನಮ್ಮ ಮನೆಯ ದಕ್ಷಿಣದ ಬಾಗಿಲಿನಿಂದ ಓಡಾಡುತ್ತೇವೆ ಎಂದರೆ ಸರಿ.

3. ದಾವಾಸ್ವತ್ತಿನಲ್ಲಿರುವ ಮನೆ ಸುಮಾರು 60 ವರ್ಷಗಳಷ್ಟು ಹಳೆಯದ್ದು. ದಾವಾಸ್ವತ್ತು ರೇವಣಸಿದ್ದಯ್ಯರವರ ಪಿತ್ರಾರ್ಜಿತ ಆಸ್ತಿ . ದಾವಾಸ್ವತ್ತನ್ನು ಮೂಲತಃ ರೇವಣಸಿದ್ದಯ್ಯರವರು ಬೇರೆಯವರಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ರೇವಣಸಿದ್ದಯ್ಯರವರು ದಾವಾಸ್ವತ್ತನ್ನು ಪರಪ್ಪ ರವರಿಂದ ದಿಃ24-05-2002 ರಂದು ದಾವನಪತ್ರದ ಮುಖಾಂತರ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ದಾನಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾನಪತ್ರದಲ್ಲಿರುವ ಸ್ವತ್ತಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾಸ್ವತ್ತನ್ನು ಖರೀದಿಸುವ ಮುನ್ನ ಈ ಎಲ್ಲಾ ದಾಖಲಾತಿಗಳನ್ನು ನಾನು ನೋಡಿ ಖರೀದಿಸಿರುತ್ತೇನೆ ಎಂದರೆ ಸರಿ . ಅದರಂತೆ ಸದರಿ ದಾನಪತ್ರವನ್ನು ಸಹ ಪರಿಶೀಲಿಸಿರುತ್ತೇನೆ ಎಂದರೆ ಸರಿ .

3. ಸದರಿ ದಾನಪತ್ರದಲ್ಲಿ ದಾವಾಸ್ವತ್ತಿನ ದಕ್ಷಿಣದ ಚಕ್ಕುಬಂದಿಯನ್ನು ನಾನು ನೋಡಿರುವುದಿಲ್ಲ. ಸದರಿ ದಾನಪತ್ರದಲ್ಲಿ ದಕ್ಷಿಣದ ಚಕ್ಕುಬಂದಿ 6 ಅಡಿ ಜಾಗ ಮತ್ತು ರಸ್ತೆ ಎಂದು ನಮೂದಾಗಿರುತ್ತದೆ ಎಂದು ನನ್ನ ಗಂಡ ನನಗೆ ತಿಳಿಸಿರುತ್ತಾರೆ. ಸದರಿ ದಾನಪತ್ರದ್ಲಿ ಮತ್ತು ನಿ.ಪಿ.1 ರಲ್ಲಿ ದಾವಾಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ - ಗಲ್ಲಿ ಎಂದರೆ ಸರಿ ; ಪಶ್ಚಿಮಕ್ಕೆ ಪಂಚಾಯಿತಿ ರಸ್ತೆ ಎಂದರೆ ಸರಿ ; ಉತ್ತರಕ್ಕೆ - ದಾನಪತ್ರದಲ್ಲಿ ಮಹಾಲಿಂಗಯ್ಯರವರ ಮನೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ- ನಿ.ಪಿ.1 ರಲ್ಲಿ ತಿರುಗಾಡುವ ದಾರಿ ಮತ್ತು ಈಶ್ವರಪ್ಪನ ಬಾಬ್ತು ಪಾಳು ಎಂದು ನಮೂದಾಗಿದೆ ಎಂದರೆ ಸರಿ . ಸದರಿ ದಾನಪತ್ರದಲ್ಲಿ ದಕ್ಷಿಣದ ಚಕ್ಕುಬಂದಿ ಈಶ್ವರಯ್ಯನ ಪಾಳು ಮತ್ತು ಶಿವಲಿಂಗಯ್ಯ ರವರ ಮನೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ಸದರಿ ದಾನಪತ್ರದ ಮುಖಾಂತರ ಪಡೆದುಕೊಂಡ ಜಮೀನಿಗೆ ರೇವಣಸಿದ್ದಯ್ಯರವರು ಮಾಲೀಕರಾಗಿದ್ದರು ಎಂದರೆ ಸರಿಯಲ್ಲ. ರೇವಣಸಿದ್ದಯ್ಯ ರವರಿಗೆ ದಾನಪತ್ರದ ಮುಖಾಂತರ ಬಂದ ಸ್ವತ್ತನ್ನು ಬಿಟ್ಟು ಬೇರೆ ಸ್ವತ್ತನ್ನು ಮಾರಾಟ ಮಾಡುವ ಹಕ್ಕು ಮತ್ತು ಅಧಿಕಾರ ಇರಲಿಲ್ಲ ಎಂದರೆ ಸರಿ . ನಿ.ಪಿ.1 ಅನ್ನುಬರೆಸುವ ಕಾಲಕ್ಕೆ ಪ್ರತಿವಾದಿಗೆ ತೊಂದರೆ ನೀಡಲು ದಕ್ಷಿಣದ ಚಕ್ಕುಬಂದಿಯನ್ನು ತಪ್ಪಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಕ್ಷಿಣದ ಕಡೆಯ ದಾರಿಯನ್ನು ಮಾರಾಟ ಮಾಡಲು ರೇವಣಸಿದ್ದಯ್ಯರವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿ ದಾರಿ ಇರುತ್ತದೆ ಎನ್ನುತ್ತಾರೆ .

**ಮುಂದುವರಿದ ಪಾಟೀಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**